# ಅಂತರಾತ್ಮ

ಅಂತರಾತ್ಮವೆಂಬುದೊಂದು ಮನಸ್ಸಿನೊಳಗಿನ ನಿಗೂಢ ವೇದಿಕೆ. ಅಲ್ಲಿ ಮೂಡುವ ಚಿತ್ರಗಳಿಗೆ ಬಣ್ಣವಿಲ್ಲ, ಆಕಾರವಿಲ್ಲ. ಅದೊಂದು ಅವ್ಯವಸ್ಥೆಯ ಗೋಜಲು ಸ್ಥಿತಿ ಅಥವಾ ಅಲ್ಲೊಂದು ಛದ್ಮವೇಷ. ಕರಾರುವಾಕ್ಕಾದ ಲೆಕ್ಕಾಚಾರ ಅಥವಾ ಸುವ್ಯಸ್ಥಿತ ನಿಶ್ಚಲ ಸ್ಥಿತಿ. ಇದೇನಾದರೂ ಆಗಬಹುದು. ಅದು ಸಂಪೂರ್ಣ ವೈಯಕ್ತಿಕವಾದದ್ದು. ಒಳಗಣ್ಣಿಗೆ ಮಾತ್ರ ಗೋಚರಿಸುವಂಥದ್ದು. ವ್ಯಕ್ತಿಗತ ಅನುಭವಕ್ಕೆ ಮಾತ್ರ ನಿಲುಕುವಂಥದ್ದು. ವೈದಿಕ ವಾಙ್ಮಯದಲ್ಲಿ ಆತ್ಮಕ್ಕೆ ವಿಶೇಷ ಸ್ಥಾನವಿದೆ. ಜೀವಾತ್ಮ, ಪರಮಾತ್ಮ ಎಂಬ ಪ್ರಭೇದಗಳಿವೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತಗಳೆಂಬ ಪರಂಪರೆಗಳಿಗೆ ಆತ್ಮವನ್ನು ಕುರಿತು ನಡೆದ ಜಿಜ್ಞಾಸೆಗಳೇ ಕಾರಣ. ಇವೆಲ್ಲವೂ ಕಾಲಕಾಲಕ್ಕೆ ಒಪ್ಪಿತ ವಾದಗಳೇ ಆಗಿವೆ. ಒಟ್ಟರ್ಥದಲ್ಲಿ ಆತ್ಮ ಎಂಬುದರ ಇನ್ನೊಂದು ಮುಖವಾದ ಅಂತರಾತ್ಮವನ್ನು ಮನಸ್ಸಿನ ಒಳಮುಖ ಎಂಬುದಾಗಿ ಅರ್ಥೈಸಿಕೊಂಡು ಚರ್ಚಿಸಬಹುದು. ಆತ್ಮವನ್ನು ನಿರಾಕರಿಸಿದ ಬುದ್ಧ ಮನಸ್ಸನ್ನು ಕುರಿತು ಚಿಂತನೆ ನಡೆಸುತ್ತಾನೆ. ಮನಸ್ಸಿನ ಒಳಪದರುಗಳನ್ನು ಬೆದಕುವಾಗ ಅಲ್ಲಿ ನಮಗೆ ಸಿಕ್ಕುವುದು ಅಂತರಾತ್ಮವೇ. ಒಬ್ಬ ವ್ಯಕ್ತಿ ಪ್ರಸನ್ನಚಿತ್ತನಾಗಿದ್ದಾನೆ ಎಂದರೆ ಶುದ್ಧಾಂತರಂಗವನ್ನು ಹೊಂದಿದ್ದಾನೆ ಎಂದು ಅರ್ಥ. ಚಿತ್ತದಲ್ಲಿ ಕ್ಲೇಶಗಳಿಲ್ಲದಿದ್ದರೆ, ಕೆಟ್ಟ ಆಲೋಚನೆಗಳು ಆತನನ್ನು ಕಂಗೆಡಿಸದಿದ್ದರೆ ಮುಖದಲ್ಲಿ ಪ್ರಸನ್ನತೆ ಪ್ರಾಪ್ತವಾಗುತ್ತದೆ. ಚಿತ್ತ ಶುದ್ಧಿಯ ಸಂಕೇತವಾಗಿ ಆತ ಒಂದು ಮುಗುಳ್ನಗುವನ್ನು ಧರಿಸುತ್ತಾನೆ. ಬುದ್ಧನ ಮುಖಭಾವವು ನಮಗೆ ಯಾವಾಗಲೂ ಪ್ರಸನ್ನವಾಗಿ ಕಾಣಲು ಅವನ ಅಂತರಂಗದ ಪರಿಶುದ್ಧತೆಯೇ ಕಾರಣ. ಕ್ಲೇಶಗಳನ್ನು ಕಳೆದ ಏಕೈಕ ದೇವಮಾನವ ಆತ. ಮುಗುಳುನಗು ಆತನು ಧರಿಸಿದ ಆಭರಣ.

ನಾವು ನಮ್ಮ ಚಿತ್ತವು ನಿರ್ದೇಶಿಸಿದಂತೆ ನಡೆಯುತ್ತೇವೆ, ನುಡಿಯುತ್ತೇವೆ. ಅದಕ್ಕೆ ಅಂತರಂಗದ ವಿವೇಚನೆ ಕಾರಣ. ನಾವು ಸಕಾರಾತ್ಮಕ ದೃಷ್ಟಿಕೋನವನ್ನು ಬೆಳೆಸಿಕೊಳ್ಳಬೇಕು ಎಂದರೆ ನಮ್ಮ ಅಂತರ್‌ದೃಷ್ಟಿ ಹಾಗಿರಬೇಕೆಂದು ಅರ್ಥ. ಈ ಜಗತ್ತು ನಾವು ಬಯಸಿದಂತೆ ಇರುತ್ತದೆ. ಒಬ್ಬ ವ್ಯಕ್ತಿ ಒಳ್ಳೆಯವನಾಗಲು ಬಯಸಿದರೆ ಇಡೀ ವಿಶ್ವವೇ ಅವನಿಗೆ ಒಳ್ಳೆಯದಾಗಿ ಕಾಣತೊಡಗುತ್ತದೆ. ಯಾರು ಚಿತ್ತದಲ್ಲಿ ದ್ವೇಷವನ್ನೇ ತುಂಬಿಕೊಂಡಿರುತ್ತಾರೆ ಅಂಥವರಿಗೆ ಇಡೀ ಜಗತ್ತು ದ್ವೇಷಮಯವಾಗಿ ಕಾಣುತ್ತದೆ. ಆದ್ದರಿಂದ ನಮ್ಮ ದೃಷ್ಟಿಕೋನವು ನಮ್ಮ ಅಂತರಾತ್ಮದ ಅಭಿವ್ಯಕ್ತರೂಪ. ಅಂತರಾತ್ಮವನ್ನು ಹೇಗೆ ಪೋಷಿಸುತ್ತೇವೋ ಹಾಗೆ ದೃಷ್ಟಿಕೋನವಿರುತ್ತದೆ. ಒಬ್ಬ ನಾಸ್ತಿಕನು ದೇವರನ್ನು ಎಂದಿಗೂ ಕಾಣಲಾರ. ಇಡೀ ಲೋಕ ಅವನಿಗೆ ಭೌತಿಕ ವಸ್ತುಗಳಂತೆ ಕಾಣುತ್ತದೆ. ಆದರೆ ಆಸ್ತಿಕನು ನೋಡುವ ನೋಟವೇ ಬೇರೆ. ಅವನು ಸಚರಾಚರ ವಸ್ತುಗಳಲ್ಲಿಯೂ ದೇವರ ಸೃಷ್ಟಿಯನ್ನೇ ಕಾಣುತ್ತಾನೆ. ಚಿತ್ತವನ್ನು ಶುದ್ಧೀಕರಿಸುವುದು ಸಾಮಾನ್ಯ ವಿಷಯವಲ್ಲ. ಚಿತ್ತವನ್ನು ಶೂನ್ಯಗೊಳಿಸುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಅದಕ್ಕೆ ಸಾಧನೆ ಬೇಕು. ಸಾಮಾನ್ಯರಿಗೆ ಶುದ್ಧ ಅಂತರಾತ್ಮವನ್ನು ಪೋಷಿಸಲು ಸಾಧ್ಯವಿದೆ. ಒಂದು ಜೆನ್ ಕಥೆ ಹೀಗಿದೆ. ಒಬ್ಬ ವಿದ್ಯಾರ್ಥಿ ತನ್ನ ಗುರುವಿನ ಬಳಿ ಹೋಗಿ, ನನ್ನ ಚಿತ್ತದಲ್ಲಿ ಈಗ ಏನೂ ಇಲ್ಲ ಏನು ಮಾಡಲಿ, ಎಂದು ಕೇಳುತ್ತಾನೆ. ಅದಕ್ಕೆ ಗುರು 'ಅದನ್ನು ಹೊರಗೆ ಎಸೆದು ಬಿಡು' ಎಂದು ಹೇಳುತ್ತಾನೆ. 'ಏನೂ ಇಲ್ಲದಿರುವಾಗ ಹೊರಗೆ ಎಸೆಯುವುದು ಏನನ್ನ?' ವಿದ್ಯಾರ್ಥಿ ತಬ್ಬಿಬ್ಬಾಗಿ ಮತ್ತೆ ಕೇಳುತ್ತಾನೆ. ಅದಕ್ಕೆ ಗುರುವು 'ಹಾಗಾದರೆ ಅದನ್ನು ನಿನ್ನಲ್ಲೇ ಇಟ್ಟುಕೊ' ಎಂದು ಹೇಳುತ್ತಾನೆ. ಆಗ ವಿದ್ಯಾರ್ಥಿಗೆ ಜ್ಞಾನೋದಯವಾಗುತ್ತದೆ. ಏನಾದರೂ ಇಟ್ಟುಕೊಳ್ಳಲೇ ಬೇಕಾದ ಈ ಚಿತ್ತದಲ್ಲಿ ಶುದ್ಧ ಅಂತರಾತ್ಮವನ್ನು ಇಟ್ಟುಕೊಳ್ಳುವುದು ಒಂದೇ ಉತ್ತಮ ಮಾರ್ಗ.

ಅಲ್ಲಮನು ಅಂತರಾತ್ಮವನ್ನು ಪ್ರಾಣಲಿಂಗವೆಂದು ಕರೆಯುತ್ತಾನೆ, 'ಅಷ್ಟದಳ ಕಮಲದ ಮೇಲಿಪ್ಪ ನಿಃಶೂನ್ಯವನ್ನರಿಯದೆ, ಪ್ರಾಣಲಿಂಗವೆಂದೆಂಬರು ಸಂತೆಯ ಸುದ್ದಿಯ ವಂಚಕರು' ಎನ್ನುತ್ತಾನೆ. ಅಷ್ಟದಳ ಕಮಲ ಎಂದರೆ ಹೃದಯ. ಭಾವನೆಗಳ ಕೇಂದ್ರವಾದ ಅಂತರಂಗದ ಚೈತನ್ಯವನ್ನರಿಯದೆ ಪ್ರಾಣಲಿಂಗವೆಂಬರು ಎಂದು ಲೇವಡಿ ಮಾಡುತ್ತಾನೆ. ಮುಂದುವರೆದು ಅಂಗದಾಪ್ಯಾಯಮಾನಕ್ಕೆ ಲಿಂಗವನರಸುವ ಭಂಗಿತರನೇಂಬೆ ಗುಹೇಶ್ವರಾ! ಎಂದು ವಚನ ಮುಕ್ತಾಯವಾಗುತ್ತದೆ. ಅಂಗದಾಪ್ಯಾಯಮಾನಕ್ಕೆ ಲಿಂಗವನರಸುವುದೆಂದರೆ ಇಷ್ಟಲಿಂಗದ ಬಹಿರಾಚರಣೆ. ಪ್ರಾಣಲಿಂಗ ಶುದ್ಧವಿಲ್ಲದಿದ್ದರೆ ಇಷ್ಟಲಿಂಗಪೂಜೆ ತೋರಿಕೆಯಾಗುತ್ತದೆ. ಹೀಗೆ ಎಲ್ಲ ಧರ್ಮಗಳೂ, ತತ್ವಗಳೂ ಮನುಷ್ಯನ ಮನಸ್ಸಿನ ನಿಗೂಢ ನೆಲೆಯನ್ನು ಶೋಧಿಸಿ ಅಂತರಾತ್ಮನ ನಿರ್ಮಲಭಾವಕ್ಕೆ ಒತ್ತು ನೀಡಿವೆ.

■ ಮೂಚಿ

## ಮಾತೇ ಮುತ್ತು

★ ಯಶಸ್ವಿ ಪುರುಷ ಯಾರೆಂದರೆ ತನ್ನ ಹೆಂಡತಿ ಖರ್ಚು ಮಾಡುವುದಕ್ಕಿಂತ ಹೆಚ್ಚು ಹಣ ಗಳಿಸುವವನು. ಹಾಗೆಯೇ ಯಶಸ್ವಿ ಮಹಿಳೆ ಯಾರೆಂದರೆ ಅಂತಹ ಗಂಡನನ್ನು ಹುಡುಕಿಕೊಳ್ಳುವವಳು.

-ಲಾನಾ ಟರ್ನರ್

★ ಜಗತ್ತಿನಲ್ಲಿ ಹೊಸತೇನಿದೆ.. ಏನೂ ಇಲ್ಲ! ಹಳತೇನಿದೆ... ಏನೂ ಇಲ್ಲ! ಎಲ್ಲವೂ ಇಲ್ಲಿ ಮೊದಲಿನಿಂದಲೂ ಇತ್ತು ಮತ್ತು ಮುಂದೆಯೂ ಇರುತ್ತದೆ.

-ಸಾಯಿ ಬಾಬಾ

★ ಮೊದಲು ಸತ್ಯ ಏನೆಂಬುದನ್ನು ತಿಳಿದುಕೊಳ್ಳಿ. ಆ ಬಳಿಕ ಅದನ್ನು ನಿಮಗೆ ಬೇಕಾದಂತೆ ತಿರುಚಿಕೊಳ್ಳಬಹುದು!

-ಮಾರ್ಕ್ ಟ್ವೈನ್

★ ಶಿಕ್ಷಣ ಅತ್ಯುತ್ತಮ ಗೆಳೆಯ. ಶಿಕ್ಷಿತ ಮನುಷ್ಯನಿಗೆ ಎಲ್ಲೆಡೆ ಗೌರವ ಸಿಗುತ್ತದೆ. ಶಿಕ್ಷಣವು ಯೌವನ ಮತ್ತು ಸೌಂದರ್ಯವನ್ನೂ ಹಿಮ್ಮೆಟ್ಟಿಸುತ್ತದೆ.

-ಚಾಣಕ್ಯ

★ ಪರಸ್ಪರ ಭೇಟಿಯಾಗುವಾಗ ನಗುವಿನೊಂದಿಗೆ ಆರಂಭಿಸಿ. ನಗುವೇ ಪ್ರೀತಿಯ ಮೂಲ.

- ಮದರ್ ಥೆರೆಸಾ

★ ಸ್ಲಿಮ್ ಆಗಿ ಕಾಣಿಸಲು ಇರುವುದು ಒಂದೇ ದಾರಿ; ನಮಗಿಂತ ದಪ್ಪಗೆ ಇರುವವರ ಜತೆಗೆ ತಿರುಗಾಡುವುದು!

-ರೋಡ್ನಿ ಡ್ಯಾಂಗರ್‌ಫೀಲ್ಡ್

★ ಕಾಲ ಎನ್ನುವುದು ಕಾಯುವವರಿಗೆ ತುಂಬಾ ನಿಧಾನ; ಭಯ ಪಡುವವರಿಗೆ ತುಂಬಾ ವೇಗ; ದುಃಖಿಸುವವರಿಗೆ ತುಂಬಾ ಸುದೀರ್ಘ; ಸಂತಸ ಪಡುವವರಿಗೆ ಬಹಳ ಕಡಿಮೆ. ಆದರೆ ಪ್ರೀತಿಸುವವರಿಗೆ ಕಾಲ ಚಿರಂತನ.

-ಹೆನ್ರಿ ವ್ಯಾನ್ ಡೈಕ್

★ ಶಿಕ್ಷಣ ಎನ್ನುವುದು ಬಹು ದೊಡ್ಡ ಆಯುಧ. ಅದರಿಂದ ನೀವು ಸಮಾಜವನ್ನು ಬದಲಾಯಿಸಬಹುದು.

-ನೆಲ್ಸನ್ ಮಂಡೇಲ

★ ಶಿಕ್ಷಣದ ಬೇರುಗಳು ತುಂಬಾ ಕಹಿ, ಆದರೆ ಹಣ್ಣುಗಳು ತುಂಬಾ ಸಿಹಿ.

-ಅರಿಸ್ಟಾಟಲ್

★ ಪ್ರೀತಿ ಇದ್ದಲ್ಲಿ ಜೀವನ ಇದೆ.

-ಮಹಾತ್ಮಾ ಗಾಂಧೀಜಿ

★ ಬದುಕನ್ನು ತೀರಾ ಗಂಭೀರವಾಗಿ ತೆಗೆದುಕೊಳ್ಳಬೇಡಿ; ಆಮೇಲೆ ಅದರಿಂದ ಜೀವಂತ ಹೊರಬರುವುದು ಕಷ್ಟವಾಗಬಹುದು.

-ಎಲ್ಬರ್ಟ್ ಹ್ಯೂಬರ್ಡ್

★ ಜ್ಞಾನದ ಮುಂದುವರಿಕೆ ಮತ್ತು ಅಂತಿಮವಾಗಿ ಸತ್ಯದ ಸಂಶೋಧನೆಯೇ ಶಿಕ್ಷಣದ ಗುರಿ.

-ಜಾನ್ ಎಫ್ ಕೆನಡಿ

★ ಸಂತೋಷ ಎನ್ನುವುದು ರೆಡಿಮೇಡ್ ಅಲ್ಲ; ಅದು ನಿಮ್ಮ ಸ್ವಂತ ಕ್ರಿಯೆಗಳಿಂದ ಸೃಷ್ಟಿಯಾಗುತ್ತದೆ.

-ದಲೈ ಲಾಮಾ